**ದಿನಾಂಕಃ 30.06.2025 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಆರ್.ಎಸ್. ವಕೀಲರಿಂದಃ–**

1. ನನಗೆ ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಯರು ಪರಿಚಯ ಇರುತ್ತಾರೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

2. ಸಾಕ್ಷಿಗೆ ನಿಡಿ–1 ವಿಲ್ ತೋರಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು ನಿಡಿ–1(ಬಿ) ಎಂದು ಗುರುತಿಸಲಾಗಿದೆ.

**ಪಾಟೀ–ಸವಾಲುಃ ವಾದಿ ಪರ ಶ್ರೀ ಎಸ್.ಜೆ.ವಕೀಲರಿಂದಃ–**

3. ನಿಡಿ–1(ಬಿ) ನನ್ನ ಸಹಿ ಆಗಿರುತ್ತದೆ. ನಿಡಿ–1(ಬಿ) ಅದು ನನ್ನ ವಿಳಾಸ ಆಗಿದ್ದು ಅದು ನನ್ನ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಡಿ–1 ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಡಿ–1 ನ್ನು ರಂಗಪ್ಪನವರು ಹೇಳಿದಂತೆ ನಾನು ಹೇಳಿ ಬರೆಸಿರುತ್ತೇನೆ. ನಿಡಿ–1 ನ್ನು ತಾಲ್ಲೂಕು ಕಛೇರಿಯ ಬಳಿ ಬರೆಸಲಾಯಿತು. ನಿಡಿ–1 ನ್ನು ಬರೆಯಲು ಪಹಣಿ ಪತ್ರಿಕೆಯನ್ನು ರಂಗಪ್ಪನವರು ನೀಡಿದ್ದರು. ರಂಗಪ್ಪನವರು ಛಾಪಾಕಾಗದವನ್ನು ತಂದಿದ್ದರು.

4. ನಾನು ಕೆ.ಆರ್.ಹಳ್ಳಿಯಿಂದ ನಿಡಿ–1 ಕ್ಕೆ ಸಾಕ್ಷಿದಾರನಾಗಿ ಬಂದಿರುತ್ತೇನೆ. ನಿಡಿ–1 ನ್ನು ನೋಂದಣಿ ಮಾಡಿಸಿರುವುದಿಲ್ಲ. ನಿಡಿ–1 ನ್ನು ದಿನಾಂಕಃ04.10.2008 ರಲ್ಲಿ ಬರೆಯಲಾಯಿತು. ವಾದಿಗಳು ಈ ದಾವೆ ಹೂಡಿದ ನಂತರ ನಾನು, ಬೋರೇಗೌಡ ಮತ್ತು ಪ್ರತಿವಾದಿಗಳು ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ–1 ರಂಗಪ್ಪನ ಸಹಿ ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.